



ಗಂಧದ ಗುಡಿ ನಿರ್ದೇಶನದ ಸಂದರ್ಭ

ಆಗಿದ್ದರೆ, ವಿಜಯಾ ರೆಡ್ಡಿ ಎರಡನೇ ಅಸಿಸ್ಟೆಂಟ್, ಸೋಮಶೇಖರ್ ಮೂರನೇ ಅಸಿಸ್ಟೆಂಟ್ ಆಗಿ ಕೆಲಸ ಮಾಡುತ್ತಿದ್ದರು. ಇವರು ಮೂವರೂ ಮುಂದೆ ಕನ್ನಡದ ಅತ್ಯಂತ ಯಶಸ್ವಿ ಚಿತ್ರ ನಿರ್ದೇಶಕರಾಗಿದ್ದು, ಕನ್ನಡಿಗರು ಎಂದಿಗೂ ಮರೆಯಲಾಗದಂಥ ಸಿನಿಮಾಗಳನ್ನು ನೀಡಿದ್ದು ವಿಶೇಷ. ಮೂವರ ಪೈಕಿ ಇಬ್ಬರು ಮೂಲತಃ ಕನ್ನಡಿಗರೇ. ಹಾಗಿದ್ದರೆ ವಿಜಯಾ ರೆಡ್ಡಿ ಕನ್ನಡ ಚಿತ್ರರಂಗದತ್ತ ಬಂದಿದ್ದೇಗೆ?

ವಿಜಯಾ ರೆಡ್ಡಿ ತಮ್ಮ ಮೊದಲ ಚಿತ್ರ ನಿರ್ದೇಶನ ಮಾಡಿದ್ದು ಮಾತೃಭಾಷೆ ತೆಲುಗಿನಲ್ಲಿ; ಅದರ ಹೆಸರು 'ಶ್ರೀಮತಿ'; 'ಊರ್ವಶಿ' ಶಾರದಾ ಮೊದಲ ಬಾರಿಗೆ ಪ್ರಧಾನ ಪಾತ್ರ ಮಾಡಿದ್ದ ಆ ಚಿತ್ರದಿಂದ ನಿರ್ಮಾಪಕರಿಗೆ ದುಡ್ಡೂ ಹುಟ್ಟಲಿಲ್ಲ; ವಿಜಯಾ ರೆಡ್ಡಿಗೆ ಹೆಸರೂ ಬರಲಿಲ್ಲ. ತಮ್ಮ ಸ್ವತಂತ್ರ ನಿರ್ದೇಶನದ ಮೊದಲ ಚಿತ್ರವೇ ಸೋತಿದ್ದರಿಂದ ನಿರಾಶರಾದ ವಿಜಯಾ ರೆಡ್ಡಿ, ಕಥೆಯೊಂದನ್ನು ಸಿದ್ಧ ಮಾಡಿಕೊಂಡು ತಮ್ಮ ಗುರು ವಿಠಲಾಚಾರ್ಯರ ಮಾತೃಭಾಷೆಯಾದ ಕನ್ನಡಕ್ಕೆ ವಲಸೆ ಬಂದರು. ಆಗ ಅವರು ಮಾಡಿದ ಚಿತ್ರವೇ 'ರಂಗಮಹಲ್ ರಹಸ್ಯ'. ಆ ಚಿತ್ರ ಒಂದು ಹಂತದಲ್ಲಿ ಹಣಕಾಸಿನ ತೊಂದರೆಯಿಂದ ಅರ್ಧದಲ್ಲಿಯೇ ನಿಂತುಹೋಗಿತ್ತು. ಚಿತ್ರೀಕರಣದ ರಷಸ್ ನೋಡಿದ ಎನ್. ವೀರಾಸ್ವಾಮಿ ಚಿತ್ರಿಕೆಗಳು ತಾಂತ್ರಿಕವಾಗಿ ಚೆನ್ನಾಗಿವೆ ಎಂದು ಮೆಚ್ಚಿ ಚಿತ್ರ ಮುಂದುವರೆಸಲು ಫೈನಾನ್ಸ್ ಮಾಡಿದರಂತೆ. ಆ ಕ್ರೈಂ ಥ್ರಿಲ್ಲರ್ ಕನ್ನಡ ಚಿತ್ರರಂಗದಲ್ಲಿ ಸಂಚಲನಕಾರಿ ಯಶಸ್ಸು ಸಾಧಿಸಿದ್ದು ವಿಜಯಾ ರೆಡ್ಡಿ ಕನ್ನಡ ಚಿತ್ರರಂಗದಲ್ಲಿಯೇ ಮುಂದುವರೆಯಲು ಕಾರಣವಾಯಿತು. ಚಿತ್ರದಿಂದ ಚಿತ್ರಕ್ಕೆ ಬೆಳೆಯತ್ತಾ ಹೋದ ವಿಜಯ್, ತಮ್ಮ ಶ್ರಮ ಹಾಗೂ ಕಸುಬುದಾರಿಕೆಯಿಂದಲೇ ವರದಪ್ಪನವರ ಗಮನ ಸೆಳೆದು ರಾಜ್ ಕ್ಯಾಂಪ್ ಸೇರಿದರು. ಮುಂದೆ ನಡೆದದ್ದು ಇತಿಹಾಸ: ಇಬ್ಬರ ಕಾಂಬಿನೇಷನ್ನಲ್ಲಿ ಬಂದ 'ಗಂಧದ ಗುಡಿ', 'ಶ್ರೀ ಶ್ರೀನಿವಾಸ ಕಲ್ಯಾಣ', 'ಮಯೂರ', 'ಸನಾದಿ ಅಪ್ಪಣ್ಣ' – ಒಂದೊಂದು ಚಿತ್ರವೂ ಒಂದೊಂದು ಅಣಿಮುತ್ತು. ಶ್ರೀನಾಥ್ ಅವರಿಂದ ಆರಂಭಿಸಿ ದ್ವಾರಕೀಶ್, ರಾಜಕುಮಾರ್, ಅನಂತನಾಗ್, ಶಂಕರ್‌ನಾಗ್, ವಿಷ್ಣುವರ್ಧನ್, ಹೀಗೆ ಆ ಜಮಾನಾದ ಕನ್ನಡದ ಎಲ್ಲ ಮುಖ್ಯ ನಾಯಕ ನಟರಿಗೂ ಅವರ ವೃತ್ತಿಜೀವನದ ಮೈಲುಗಲ್ಲಿನಂಥ ಚಿತ್ರಗಳನ್ನು ನೀಡಿದವರು ವಿಜಯಾ ರೆಡ್ಡಿ. ಆ ಎಲ್ಲ ಹೀರೊಗಳ ಮೂಲಕ ತಾವೂ ಬೆಳೆದು, ಅವರನ್ನೂ ಬೆಳೆಸಿದರು. 'ಕೆಂಪು ಗುಲಾಬಿ' ಚಿತ್ರದಲ್ಲಿ ರಮೇಶ್ ಅರವಿಂದ್ ಜೊತೆ ಕೆಲಸ ಮಾಡಿದ್ದು ಬಿಟ್ಟರೆ ಅವರು ಹೊಸಬರ ಜೊತೆ ಕೆಲಸ ಮಾಡಿದ್ದು ಕಡಿಮೆಯೇ. ತಮ್ಮ ಚಿತ್ರಗಳ ಚಿತ್ರೀಕರಣಕ್ಕಾಗಿ ಅದ್ದೂರಿ ಸೆಟ್‌ಗಳನ್ನು ಹಾಕಿಸುತ್ತಿದ್ದ, ತಮ್ಮ ಚಿತ್ರಗಳ ಪಾತ್ರಗಳ ಆಯ್ಕೆಯಲ್ಲಿ ಅಪರೂಪದ ಪ್ರಯೋಗಗಳನ್ನು ಮಾಡುತ್ತಿದ್ದ ವಿಜಯ್, ತಮ್ಮ ದುಡಿಮೆಗಾಗಿ ಇಂತಿಷ್ಟೇ ಹಣ ಬೇಕೆಂದು ಯಾವತ್ತೂ ಬೇಡಿಕೆ ಇಟ್ಟವರಲ್ಲ. ಕನ್ನಡದಲ್ಲಿ ಅವರು ದೊಡ್ಡ ನಿರ್ದೇಶಕರೆಂದು ಹೆಸರು ಮಾಡಿದ್ದ ಕಾಲದಲ್ಲಿಯೂ ಅವರ ಹೆಂಡತಿ ಚೆನ್ನೈನಲ್ಲಿ ಪುಟ್ಟ ಮನೆಯಲ್ಲಿ ನಾಲ್ಕು ಮಕ್ಕಳೊಂದಿಗೆ ವಾಸ ಮಾಡುತ್ತಾ, ಜೀವನೋಪಾಯಕ್ಕಾಗಿ ಹಸು ಕಟ್ಟಿಕೊಂಡು ಹಾಲು ಮಾರುತ್ತಿದ್ದರಂತೆ. ಹೀಗಾಗಿಯೋ ಏನೋ, ಮುಂದೆ ವಿಜಯಾ ರೆಡ್ಡಿ, ವಿ. ಸೋಮಶೇಖರ್ ಜೊತೆ ಸೇರಿ 'ವಿಜಯ್ ಶೇಖರ್ ಪ್ರೊಡಕ್ಷನ್ಸ್' ಎನ್ನುವ ಚಿತ್ರ ನಿರ್ಮಾಣ ಸಂಸ್ಥೆಯೊಂದನ್ನು ಆರಂಭಿಸಿ, ತಾವೇ ಚಿತ್ರನಿರ್ಮಾಣಕ್ಕಿಳಿದಿದ್ದರು.

ವಿಜಯ್ ಆ ಕಾಲದ ಅತ್ಯಂತ ಯಶಸ್ವಿ ಚಿತ್ರ ನಿರ್ದೇಶಕರಾಗಿದ್ದರು. ಅವರು ಮುಟ್ಟಿದ್ದೆಲ್ಲ ಚಿನ್ನವಾಗುತ್ತಿತ್ತು. ಅವರ ಬಳಿ ಹಲವು ವರ್ಷಗಳ ಕಾಲ ಸಹಾಯಕ ನಿರ್ದೇಶಕರಾಗಿದ್ದ ಎ.ಎನ್. ಜಯರಾಮಯ್ಯ ನೆನಪಿಸಿಕೊಳ್ಳುವಂತೆ, ವಿಜಯ್ ಅವರ ಅಪೂರ್ವವಾದ ಯಶಸ್ಸಿಗೆ ಕಾರಣ ಅವರ ಶಿಸ್ತು, ಬದ್ಧತೆ ಹಾಗೂ ಕಠಿಣ ದುಡಿಮೆ. ವಿಜಯ್ ಅವರಿಗೆ ಕನ್ನಡ ಬರುತ್ತಿರಲಿಲ್ಲವಾದ್ದರಿಂದ ಅವರ ಸಹಾಯಕರು ಪ್ರತಿ ಸೀನ್ ಅನ್ನೂ ಚಿತ್ರೀಕರಣದ ಹಿಂದಿನ ರಾತ್ರಿಯೇ ಓದಿ ಹೇಳಬೇಕಿತ್ತಂತೆ. ಅವರು ಪ್ರತಿ ದೃಶ್ಯವನ್ನು ಎಷ್ಟು ಚಿತ್ರಿಕೆಗಳನ್ನಾಗಿ ವಿಂಗಡಿಸಬೇಕು, ಯಾವ ಶಾಟ್ ಹೇಗೆ ಶೂಟ್ ಮಾಡಬೇಕು, ಯಾವುದು ಕ್ಲೋಸಪ್, ಯಾವುದಕ್ಕೆ ಟ್ರಾಲಿ ಶಾಟ್, ಯಾವ ದೃಶ್ಯಕ್ಕೆ ಎಂಥ ಲೆನ್ಸ್ ಬೇಕು ಇತ್ಯಾದಿ ಎಲ್ಲ ವಿವರಗಳನ್ನೂ ಹೇಳಿ ಬರೆಸುತ್ತಿದ್ದರಂತೆ. ಜೊತೆಗೆ ಪ್ರತಿ ಪಾತ್ರದ ಅಭಿನಯವನ್ನೂ ತಾವೇ ರೂಮಿನಲ್ಲಿ ಅಸಿಸ್ಟೆಂಟ್‌ಗಳ ಮುಂದೆ ಅಭಿನಯಿಸಿ ತೋರಿಸುತ್ತಿದ್ದರಂತೆ. ಅವರು ಚಿತ್ರದ ಕಥೆ, ಚಿತ್ರಕಥೆ, ದೃಶ್ಯಗಳ ವಿವರ, ಪಾತ್ರಗಳ ಹಾವಭಾವ, ಇದನ್ನೆಲ್ಲ ಪೂರ್ಣವಾಗಿ ತಲೆಯಲ್ಲಿ ತುಂಬಿಕೊಂಡಿರುತ್ತಿದ್ದರಂತೆ. ಇವುಗಳ ಜೊತೆಗೆ ಅತ್ಯಂತ ಕರಾರುವಾಕ್ಕಾಗಿ ಚಿತ್ರೀಕರಣ ಮಾಡುತ್ತಿದ್ದರಂತೆ. ಚಿತ್ರೀಕರಣದ ಆರಂಭಕ್ಕೂ ಮುಂಚೆಯೇ ಸಾಂಗ್ ರೆಕಾರ್ಡಿಂಗ್, ಡಬ್ಬಿಂಗ್, ರೀರೆಕಾರ್ಡಿಂಗ್, ಸೌಂಡ್ ಎಫೆಕ್ಟ್ ಇವುಗಳಿಗೆಲ್ಲಾ ದಿನಾಂಕ ನಿಗದಿ ಮಾಡಿ, ಇಂತಿಂಥ ದಿನ ಇಂತಿಂಥ ಕೆಲಸ ಎಂದು ಸ್ಟುಡಿಯೋಗಳಿಗೆ ವೇಳಾಪಟ್ಟಿ ಕಳಿಸುತ್ತಿದ್ದರಂತೆ. ಯೋಜಿತ ರೀತಿಯ ಕೆಲಸದ ಶೈಲಿಯಿಂದಾಗಿ ಅವರು ಅತ್ಯಂತ ಕಡಿಮೆ ಅವಧಿಯಲ್ಲಿಯೇ ಚಿತ್ರೀಕರಣ ಮುಗಿಸುತ್ತಿದ್ದರು. ಚಿತ್ರೀಕರಣಕ್ಕೆಂದು 40 ದಿನ ನಿಗದಿಪಡಿಸಿದ್ದರೆ, 39 ದಿನಕ್ಕೇ ಶೂಟಿಂಗ್ ಮುಗಿಸುತ್ತಿದ್ದರಂತೆ. ಇಂಥ ದುಡಿಮೆಯ ಕಾರಣದಿಂದ ಎರಡು ತಿಂಗಳಿಗೋ ಮೂರು ತಿಂಗಳಿಗೋ ಒಮ್ಮೆ ಮಾತ್ರ ಮನೆಗೆ ಹೋಗುತ್ತಿದ್ದರಂತೆ. ಎಡಿಟಿಂಗ್, ಡಬ್ಬಿಂಗ್ ಎಲ್ಲವೂ ತಮ್ಮ ಸಮಕ್ಷಮದಲ್ಲಿಯೇ ನಡೆಯಬೇಕು ಎನ್ನುತ್ತಿದ್ದರಂತೆ. ಅವರು ಟೆಕ್ನೀಷಿಯನ್‌ಗಳಿಂದ, ನಟ ನಟಿಯರಿಂದ ಕೆಲಸ ತೆಗೆಯುವುದರಲ್ಲಿ ನಿಷ್ಣಾತರಾಗಿದ್ದರು.

ವಿಜಯ್ ರೆಡ್ಡಿಯವರ ಬಹುತೇಕ ಸಿನಿಮಾಗಳಿಗೆ ಬರಹಗಾರರಾಗಿದ್ದವರು ಉದಯಶಂಕರ್ ಮತ್ತು ಎಂ.ಡಿ. ಸುಂದರ್. ತಮಗೆ ಬೇಕಾದಂತೆ ಪಾತ್ರ, ದೃಶ್ಯ ಅಥವಾ ಸಂಭಾಷಣೆ ಪಡಿಮೂಡುವವರೆಗೂ ವಿಜಯ್



ತಮ್ಮ ಅಭಿಮಾನದ ಕಲಾವಿದ ರಾಜಕುಮಾರ್ ಅವರಿಗೆ ವಿಜಯ್‌ರಿಂದ ಹೂಮಾಲೆ